ಸುಳ್ಯ ತಾಲ್ಲೂಕಿನಲ್ಲಿ ಕ. ರಾ. ರ. ಸಾ. ಬಸ್ಸು ನಿಲ್ದಾಣದ ಭೂವಿಯಂ ಬಗ್ಗೆ

೧೦೮೨ ಶ್ರೀ ಕೆ. ಕುಶಾಲ, (ಸುಳ್ಯ).—ಮಾನ್ಯ ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.—

ಅ) ಸುಳ್ಯ ತಾಲ್ಲೂಕಿನಲ್ಲಿ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಬಸ್ಸು ನಿಲ್ದಾಣಕ್ಕೆ ಎಷ್ಟು ಎಕರೆ ಜಮೀನನ್ನು ನಿಗದಿ ಮಾಡಲಾಗಿದೆ ?

ಆ) ಈಗ ಸದರಿ ಬಸ್ಸು ನಿಲ್ದಾಣದ ಸ್ಥಳ ಸ್ವಾಧೀನತೆ ಯಾವ ಹಂತ ತಲುಪಿದೆ ?

ಇ) ಖಾಸಗಿ ಜಮೀನು ಸರ್ಕಾರ ಸ್ವಾಧೀನತೆ (ಸಾರ್ವಜನಿಕ ಉದ್ದೇಶಕ್ಕೆ) ಪಡೆಯಲು ಉದ್ದೇಶಿಸಿರುವ ತುರ್ತು ಕ್ರಮಗಳೇನು ?

ಶ್ರೀ ಕೆ. ಜೆ. ಜಾರ್ಜ್ (ಸಾರಿಗೆ ರಾಜ್ಯ ಸಚಿವರು). —

ಅ) ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಸುಳ್ಯದ ಸರ್ವೆ ಸಂಖ್ಯೆ ೨೭೯ರಲ್ಲಿ ೧೫೦ ಅಡಿ ಉದ್ದ ಮತ್ತು ೧೫೦ ಅಡಿ ಅಗಲವಿರುವ ಜಮೀನು ಮತ್ತು ಅದರ ಪಕ್ಕದಲ್ಲಿರುವ ಜಮೀನನ್ನು ಕೊಂಡು ಕೊಳ್ಳಲು ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಪ್ರಸ್ತಾವನೆ ಕಳುಹಿಸಿ, ಸದರಿ ಭೂಮಿಯನ್ನು ವಶಪಡಿಸಿಕೊಳ್ಳಲು ಕೇಳಿಕೊಂಡಿದೆ.

ಆ) ಜಮೀನಿನ ಭೂಸ್ವಾಧೀನದ ಬಗ್ಗೆ ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆ ಬಂದಿರುತ್ತದೆ.

ಇ) ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆಯನ್ನು ತೆರವು ಮಾಡಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ.

ಶ್ರೀ ಕೆ ಕುಶಾಲ.—ನನ್ನ (ಇ) ಪ್ರಶ್ನೆಗೆ ಉತ್ತರವಾಗಿ ಉಚ್ಚ ನ್ಯಾಯಾಲಯದಿಂದ ತಡೆಯಾಜ್ಞೆಯನ್ನು ತೆರವು ಮಾಡಲು ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಹೇಳಿದ್ದೀರಿ, ಈ ತಡೆಯಾಜ್ಞೆ ಯಾವಾಗ ಬಂತು ? ಈ ಸ್ಟೇ ಅನ್ನು ವೆಕೇಟ್ ಮಾಡಲು ಸರ್ಕಾರ ಏನು ಕ್ರಮಗಳನ್ನು ಕೈಗೊಂಡಿದೆಯೆಂದು ಕೇಳಬಯಸುತ್ತೇನೆ.

ಶ್ರೀ ಕೆ. ಜೆ. ಜಾರ್ಜ್.—ಈಗಾಗಲೇ ಸುಳ್ಯ ಬಸ್ ನಿಲ್ದಾಣದಲ್ಲಿ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣವನ್ನು ಪ್ರಾರಂಭ ಮಾಡಲಿಕ್ಕೆ ೧೫೦ ಅಡಿ ಉದ್ದ ಮತ್ತು ೧೫೦ ಅಡಿ ಅಗಲವಿರುವ ಜಮೀನನ್ನು ಮತ್ತು ಅದರ ಪಕ್ಕದಲ್ಲಿರುವ ಜಮೀನನ್ನು ತೆಗೆದುಕೊಳ್ಳಲಿಕ್ಕೆ ದಕ್ಷಿಣ ಕನ್ನಡ ಜಿಲ್ಲಾಧಿಕಾರಿಗಳವರಿಗೆ ಈಗಾಗಲೇ ೭೮ ಸಾವಿರದ ಳಖಿಖಿ ರೂಪಾಯಿಗಳನ್ನು ನಾವು ಕೊಟ್ಟಿದ್ದೇವೆ. ಆದರೆ ಈ ಅಕ್ವಿಜಿಷನ್ ಆಕ್ಟ್‌ಗೆ ಈಗಾಗಲೇ ಹೈಕೋರ್ಟ್‌ನವರು ಸ್ಟೇ ಕೊಟ್ಟಿರುವುದರಿಂದ ಈ ಕೆಲಸವನ್ನು ಪ್ರಾರಂಭ ಮಾಡುವುದಕ್ಕೆ ಆಗಲಿಲ್ಲ. ಆದಷ್ಟು ಬೇಗನೆ ಸ್ಟೇ ತೆರವು ಮಾಡಲು ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಕೆ. ಕುಶಾಲ.—೪(೧) ನೋಟಿಫಿಕೇಷನ್ ಆದ ಸ್ಥಳವಾಗಿದೆ. ಇದಕ್ಕೆ ತಡೆಯಾಜ್ಞೆ ಬಂದು ೪–೫ ವರ್ಷಗಳಾಗಿವೆ. ಆದರೂ ಕೂಡ ಸರ್ಕಾರದಿಂದ ಕೌಂಟರ್ ಅನ್ನು ಉದ್ದೇಶಪೂರ್ವಕವಾಗಿ ಹಾಕಲು ತಡ ಮಾಡಿದ್ದಾರೆ. ಸಂಬಂಧಪಟ್ಟವರು ಇದರ ಬಗ್ಗೆ ಹೆಚ್ಚು ಆಸಕ್ತಿ ವಹಿಸಿ ಕೂಡಲೆ ತಡೆಯಾಜ್ಞೆಯನ್ನು ತೆರವು ಮಾಡಲು ಕ್ರಮ ಕೈಗೊಳ್ಳುತ್ತೀರಾ ?

ಶ್ರೀ ಕೆ. ಜೆ. ಜಾರ್ಜ್.—ಈಗಾಗಲೇ ಹೇಳಿದ್ದೇನೆ, ಆದಷ್ಟು ಬೇಗ ಸ್ಟೇ ತೆರವು ಮಾಡಲು ಕ್ರಮ ಕೈಗೊಳ್ಳುತ್ತೇನೆಂದು.

ಅಧ್ಯಕ್ಷರು.—ತಾವು ಕೇಳಿರುವುದು ಅಂತರ್ಜಲ ಸಮೀಕ್ಷೆ ಸಂಬಂಧಪಟ್ಟ ಗಿರಿಜನೆಯ ಪ್ರಶ್ನೆ ಇದು ಮೈನ್ಸ್ ಅಂಡ್ ಜಿಯಾಲಜಿ ಡಿಪಾರ್ಟ್‌ಮೆಂಟಿಗೆ ಬರುತ್ತದೆ. ನೀವು ಲೋಕೋಪಯೋಗಿ ಇಲಾಖೆಯವರಿಗೆ ಕೊಟ್ಟಿದ್ದೀರಿ. ಆದರೆ ಇದು ಮೈನ್ಸ್ ಅಂಡ್ ಜಿಯಾಲಜಿ ಇಲಾಖೆಗೆ ಸಂಬಂಧಪಡುತ್ತದ್ದು ಇದನ್ನು ಮುಂದಿನವಾರ ತೆಗೆದುಕೊಳ್ಳುತ್ತೇನೆ.

ಕೊಪ್ಪಾ ತಾಲ್ಲೂಕಿನಲ್ಲಿ ನ್ಯಾಯಾಲಯ ಸ್ಥಾಪನೆ

೧೨೯೯. ಶ್ರೀ ಯು.ಕೆ. ಶಾಮಣ್ಣ (ಶೃಂಗೇರಿ).—ಮಾನ್ಯ ಯೋಜನೆ, ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಪ್ರತಿ ತಾಲ್ಲೂಕಿಗೆ ಒಂದು ನ್ಯಾಯಾಲಯ ಕೊಡುವ ಯೋಜನೆಯೇನಾದರೂ ಸರ್ಕಾರದ ಮುಂದಿದೆಯೆ ?

ಆ) ಹಾಗಿದ್ದಲ್ಲಿ, ಚಿಕ್ಕಮಗಳೂರು ಜಿಲ್ಲಾ, ಕೊಪ್ಪಾ ತಾಲ್ಲೂಕಿಗೆ ನ್ಯಾಯಾಲಯ ಮಂಜೂರು ಮಾಡಲಾಗುವುದೆ ?

ಇ) ಇಲ್ಲಿ ನ್ಯಾಯಾಲಯ ಪ್ರಾರಂಭಿಸಲು ಸರ್ಕಾರಕ್ಕಿರುವ ತೊಂದರೆಯೇನು ?

ಶ್ರೀ ಎಂ. ವೀರಪ್ಪ ಮೊಯ್ಲಿ (ಯೋಜನೆ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಪ್ರವಾಸೋದ್ಯಮ ಮಂತ್ರಿಗಳು).—

ಅ) ರಾಜ್ಯದ ಎಲ್ಲಾ ತಾಲ್ಲೂಕು ಕೇಂದ್ರಗಳಲ್ಲಿ ಎಲ್ಲೆಲ್ಲಿ ಕೋರ್ಟ್‌ಗಳು ಇರುವುದಿಲ್ಲವೋ ಅಂತಹ ತಾಲ್ಲೂಕುಗಳಲ್ಲಿ ಮುನ್ಸೀಫ್ ಮತ್ತು ಜುಡಿಷಿಯಲ್ ಮ್ಯಾಜಿಸ್ಟ್ರೇಟ್ ಫರ್ಸ್ಟ್ ಕ್ಲಾಸ್ ಕೋರ್ಟ್‌ಗಳನ್ನು ಸ್ಥಾಪಿಸುವ ಇಚ್ಛೆಯನ್ನು ಸರ್ಕಾರವು ಹೊಂದಿರುತ್ತದೆ.

ಆ) ವಿಷಯವು ಉಚ್ಚ ನ್ಯಾಯಾಲಯದ ಪರಿಶೀಲನೆಯಲ್ಲಿದೆ.

ಇ) ಸರ್ಕಾರವು ಉಚ್ಚ ನ್ಯಾಯಾಲಯದಿಂದ ಪ್ರಸ್ತಾವನೆಯನ್ನು ಸ್ವೀಕರಿಸಿದ ನಂತರ ದೊರೆಯುವ ಸಂಪನ್ಮೂಲಗಳಿಗೊಳಪಟ್ಟು ಪರಿಶೀಲಿಸುತ್ತದೆ.

ಶ್ರೀ ಯು. ಕೆ. ಶಾಮಣ್ಣ.—ಸನ್ಮಾನ್ಯ ಅಧ್ಯಕ್ಷರೆ, ಪ್ರತಿಯೊಂದು ತಾಲ್ಲೂಕಿಗೆ ಒಂದು ಕೋರ್ಟನ್ನು ಕೊಡಬೇಕು ಎಂದು ೧೦–೧೨ ವರ್ಷಗಳಿಂದಲೂ ನಾವು ಕೇಳುತ್ತಾ ಇದ್ದೇವೆ. ಆದರೆ ಇದೇ ರೀತಿ ಉತ್ತರ ಸಿಗುತ್ತಾ ಇದೆ. ಮುನ್ಸೀಫ್ ಕೋರ್ಟ್ ಬೇಕು, ಕೊಡುತ್ತೇವೆ. ಈ ವಿಷಯ ಉಚ್ಚ ನ್ಯಾಯಾಲಯದ ಪರಿಶೀಲನೆಯಲ್ಲಿದೆ ಎನ್ನುವ ಉತ್ತರ ದೊರೆಯುತ್ತಾ ಇದೆ. ಇದಕ್ಕೆ ಎಷ್ಟು ವರ್ಷ ಕಾಲ ಬೇಕು, ಆದಷ್ಟು ಬೇಗ ಮಾನ್ಯ ಮಂತ್ರಿಯವರು ಇದರ ಬಗ್ಗೆ ಗಮನಹರಿಸಿ ನ್ಯಾಯಾಲಯದ